MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 ಸಂಚಿಕೆ: 222 ಬುಧವಾರ : 18-06-2025 ರಾಯಚೂರು RNI NO: KARKAN/2022/90446 ಪುಟ: 4 ಬೆಲೆ: ರೂ: 2-00

VOLUME: 04 ISSUE: 222 WEDNSDAY : 18-06-2025 RAICHUR EMAIL: YUVAMARGA@GMAIL.COM PAGE: 4 PRICE: Rs: 2-00

## ಬಿಜೆಪಿಗೆ ರಾಜೀನಾಮೆ ಕೇಳುವ ನೈತಿಕ ಹಕ್ಕಿಲ್ಲ



**ಬೆಂಗಳೂರು, ಜೂ. 17–** ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ತಮ್ಮ ರಾಜೀನಾಮೆ ಕೇಳುವ ನೈತಿಕತೆ ಬಿಜೆಪಿ ನಾಯಕರಿಗಿಲ್ಲ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿಂದು ನಡೆದ ಪರಿಸರ ದಿನಾಚರಣೆ ಕಾರ್ಯಕ್ರಮದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಂಭಮೇಳದಲ್ಲಿ ಕಾಲ್ತುಳಿತ ಆಗಿತ್ತು. ಮೊನ್ನೆ ಅಹಮದಾಬಾದ್‌ನಲ್ಲಿ ವಿಮಾನ ದುರಂತ ಆಗಿದೆ. ಮಹಾರಾಷ್ಟ್ರದಲ್ಲಿ ಸೇತುವೆ ಕುಸಿದು ನಾಲ್ವರು ಮೃತಪಟ್ಟರು. ಬಿಹಾರದಲ್ಲಿ ಸೇತುವೆ ಉದ್ಘಾಟನೆ ಮೊದಲೇ ಕುಸಿದು 140 ಮಂದಿ ಮೃತಪಟ್ಟರು. ಗೋದ್ರಾದಲ್ಲಿ ನಡೆದ ದುರುಂತಕ್ಕೆ ಯಾರು ರಾಜೀನಾಮೆ ಕೊಟ್ಟರು. ರೈಲ್ವೆ ದುರಂತದಲ್ಲಿ ಮೃತಪಟ್ಟರಲ್ಲಾ ಅದಕ್ಕೆಲ್ಲಾ ಯಾರು ಜವಾಬ್ದಾರಿ ಇವರೆಲ್ಲಾ ರಾಜೀನಾಮೆ ಕೊಟ್ಟರಾ ಎಂದು ಹರಿಹಾಯ್ದರು.

2ನೇಪುಟಕ್ಕೆ

## ಜೂ.20 ರಂದು ಕಲ್ಯಾಣ ಕರ್ನಾಟಕದ ಜಾಗೃತಿ ಸಮಾವೇಶ




ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.17–**ಜೂ.20ರಂದು ರಾಯಚೂರಿನ ಮನೋರಂಜನಾ ಕೇಂದ್ರ ಅಂಬೇಡ್ಕರ್ ವೃತ್ತದ ಪಕ್ಕದಲ್ಲಿ ಕಲ್ಯಾಣ ಕರ್ನಾಟಕದ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಸೇನೆ ಕರ್ನಾಟಕ ಅಧ್ಯಕ್ಷರಾದ ಬಸವರಾಜ್ ಮೈಲಾರಿ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಕಲ್ಯಾಣ ಕರ್ನಾಟಕದ ಭಾಗದಲ್ಲಿ ಕನ್ನಡ ಜಾಗೃತಿ ಮೂಡಿಸುವ ಸಮಾವೇಶ ಹಮ್ಮಿಕೊಳ್ಳಲಾಗಿದ್ದು ಈ ಈ ಸಮಾವೇಶಕ್ಕೆ ಈ ಭಾಗದ ಸಚಿವರಾದ ಎನ್. ಎಸ್ ಬೋಸರಾಜ, ಲೋಕಸಭಾ ಸದಸ್ಯರು, ಶಾಸಕರುಗಳು, ಮಾಜಿ ಶಾಸಕರು, ಜನಪ್ರತಿನಿಧಿಗಳು ಮತ್ತು ಕನ್ನಡ ಸೇನೆ ಕರ್ನಾಟಕ ರಾಜ್ಯಾಧ್ಯಕ್ಷರಾದ ಕೆ.ಆರ್ ಕುಮಾರ ಭಾಗವಹಿಸಲಿದ್ದು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಹೇಳಿದರು.

ಅದೇ ರೀತಿ ಜೂ.18ರಂದು ಗಂಗಾವತಿಯಲ್ಲಿ ಕನ್ನಡ ಜಾಗೃತಿ ಸಮಾವೇಶ ಜಾಗೃತಿ ಈ ಸಮಾವೇಶಕ್ಕೆ ತೆರಳಲು ವಾಹನ ವ್ಯವಸ್ಥೆ ಮಾಡಲಾಗಿದ್ದು ಮಾನ್ವಿ ಪಟ್ಟಣದ ಬಸವ ವೃತ್ತದಲ್ಲಿ ಆಗಮಿಸಬೇಕೆಂದು ಮತ್ತು ಈ ನಂಬರಿಗೆ 9686973869 ಸಂಪರ್ಕಿಸಲು ಕೋರಲಾಗಿದೆ.

ಈ ಸಂದರ್ಭದಲ್ಲಿ ವಾಜಿದ್ ಸಾಜಿದ್, ದೊಡ್ಡಪ್ಪ ಹೂಗಾರ, ಶಿವನಗೌಡ ಬ್ಯಾಗವಾಟ್, ಮಹೆಬೂಬ್, ಶೇಕ್ ಮುಸ್ತಫ, ರಾಜೇಶ, ಮಂಜುನಾಥ, ಶರಣಗೌಡ ಇತರರು ಇದ್ದರು.

## ತೀವ್ರ ಅತಿಸಾರ ಬೇಧಿ ನಿಯಂತ್ರಿಸಲು ಜನರಲ್ಲಿ ಜಾಗೃತಿ ಮೂಡಿಸಿ



ಯುವ ಮಾರ್ಗ ಸುದ್ದಿ

**ರಾಯಚೂರು,ಜೂ.17–**ತೀವ್ರ ಅತಿಸಾರ ಬೇಧಿ ನಿಯಂತ್ರಣಕ್ಕಾಗಿ ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ಪಾಂಡ್ವೆ ತುಕಾರಾಮ್ ಅವರು ಹೇಳಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯದ ಸಭಾಂಗಣದಲ್ಲಿ ಜೂನ್ 17ರಂದು ನಡೆದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆಶಾ ಕಾರ್ಯಕರ್ತೆಯರು ಮನೆಮನೆಗೆ ಭೇಟಿ ನೀಡಿ ಅತಿಸಾರ ಬೇಧಿ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕು. 0-5 ವರ್ಷದೊಳಗಿನ ಮಕ್ಕಳಿಗೆ ಓ.ಆರ್.ಎಸ್ ಪ್ಯಾಕೆಟ್ ವಿತರಿಸುವಂತೆ ತಿಳಿಸಿದರು. ಸಾರ್ವಜನಿಕರಲ್ಲಿ ವೈಯಕ್ತಿಕ ಶುಚಿತ್ವ ಕಾಪಾಡಲು, ಶೌಚಾಲಯ ಬಳಸುವ ಬಗ್ಗೆ ಜಾಗೃತಿ ಮೂಡಿಸುವಂತೆ ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಇಲಾಖೆ, ಶಿಕ್ಷಣ ಇಲಾಖೆ, ಅಂಗನವಾಡಿ ಮೇಲ್ವಿಚಾರಕರಿಗೆ ಶಾಲಾ ಕಾಲೇಜಗಳಲ್ಲಿ ಕೈತೊಳೆಯುವ ವಿಧಾನದ ಬಗ್ಗೆ ಜಾಗೃತಿ ಮೂಡಿಸಬೇಕು ಹಾಗೂ ಶುಚಿತ್ವ ಕಾಪಾಡಬೇಕೆಂದರು.

### 108 ತುರ್ತು ವಾಹನ ಚಾಲಕ ಆನಂದಯ್ಯ ಆಟಾಟೋಪ, ಬಡವರಿಗೆ ಸಿಗದ ಸೇವೆ

# ಸರ್ಕಾರಿ ಕೆಲಸಕ್ಕೆ ಹಾಜರಿ, ಖಾಸಗಿ ದುಡಿಮೆ

■ ಹನುಮಂತ ಕನ್ನಾಳ

**ಲಿಂಗಸುಗೂರು,ಜೂ.17–**ಈತ 108 ತುರ್ತು ವಾಹನ ಚಾಲನೆಗೆ ನೇಮಕವಾಗಿದ್ದಾನೆ. ಆದರೆ ಈತ ತನ್ನದೇ ಆದ ಖಾಸಗಿ ಅಂಬುಲೆನ್ಸ್ ಇಟ್ಟದ್ದು ಕರ್ತವ್ಯದ ವೇಳೆ ಸ್ವಂತ ವಾಹನ ಚಲಾಯಿಸಿ ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿದ್ದಾನೆ. ಈತನ ಮೇಲೆ ಕ್ರಮ ಜರುಗಿಸಬೇಕಾಗದ ಆರೋಗ್ಯ ಇಲಾಖೆ ನಿದ್ರೆಗೆ ಜಾರಿದ್ದು ನಿರ್ವಹಣೆ ಹೊಣೆ ಹೊತ್ತವರು ಅಧಿಕೃತ ದೂರು ನೀಡಿದರು ಕ್ರಮ ವಹಿಸದೇ ಇರುವುದು ಮೇಲಾಧಿಕಾರಿಗಳ ನಡೆ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಲಿಂಗಸುಗೂರು ತಾಲೂಕಿನಲ್ಲಿನ 108 ವಾಹನ ಚಲಾಯಿಸಲು ಆನಂದಯ್ಯ ಅಲಿಯಾಸ ಆನಂದ ನೇಮಕವಾಗಿದ್ದಾನೆ. ಅಪಘಾತ ಸೇರಿದಂತೆ ತುರ್ತು ಆರೋಗ್ಯ ಸೇವೆಗೆ 24 ಗಂಟೆ 108 ವಾಹನ ಕರೆ ಮಾಡಿದಾಗ ಬಂದು ಸಾರ್ವಜನಿಕರಿಗೆ ಉಚಿತ ಸೇವೆ ನೀಡಬೇಕು. ಆದರೆ ಈ ಆನಂದಯ್ಯ ಲಿಂಗಸುಗೂರು ಸರ್ಕಾರಿ ಆಸ್ಪತ್ರೆ ಹತ್ತಿರ ತನ್ನದೇ ಒಂದು ತುರ್ತು ವಾಹನ ಇಟ್ಟಿದ್ದು 108 ವಾಹನದ ಕರ್ತವ್ಯದ ಸಮಯದಲ್ಲಿ ಸರ್ಕಾರಿ, ಖಾಸಗಿ ಆಸ್ಪೆಗೆ ಬರುವ ರೋಗಿಗಳನ್ನು ಸಾಗಿಸಲು ತನ್ನದೇ ವಾಹನ ಬಳಕೆ ಮಾಡುತ್ತಾನೆ. ಇಂತಹ ಸಂದರ್ಭದಲ್ಲಿ 108 ವಾಹನಕ್ಕೆ ತುರ್ತು ಕರೆ ಬಂದಾಗ ಅಲ್ಲಿ ಚಾಲಕ ಆನದಂಯ್ಯ ಇರದೇ ತನ್ನದೇ ವಾಹನ ಚಲಾಯಿಸಲು ಹೋಗಿರುತ್ತಾನೆ. ಈ ವೇಳೆ ಗಂಟೆಗಟ್ಟಲೆ 108 ತುರ್ತು ವಾಹನ ಆಗಮಿಸದೇ




ಗಾಯಾಳುಗಳು, ರೋಗಿಗಳಿಗೆ ಚಿಕಿತ್ಸೆ ಸಿಗುತ್ತಿಲ್ಲ. ಇದರಿಂದ ಅನೇಕ ಅಪಘಾತದ ಸಂದರ್ಭದಲ್ಲಿ 108 ವಾಹನಕ್ಕೆ ಕರೆ ಮಾಡಿದರು ಸಕಾಲಕ್ಕೆ ವಾಹನ ಬಾರದೇ ಅನೇಕರು ಯಾತನೆ ಅನುಭವಿಸಿದ್ದಾರೆ. ಇದಕ್ಕೆ ಕಾರಣ ಅನಂದಯ್ಯ 108 ವಾಹನದ ಕರ್ತವ್ಯದ ಅವದಿಯಲ್ಲಿ ತನ್ನದೇ ಅಂಬುಲೆನ್ಸ್ ಚಲಾಯಿಸಿಕೊಂಡು ಹಣದಾಸೆಗೆ ಬೇರೆ ಕಡೆ ತೆರಳಿರುತ್ತಾನೆ.



ಲಿಂಗಸುಗೂರು ಪಟ್ಟಣದಲ್ಲಿ ಸ್ಕ್ಯಾನಿಂಗ್, ರಕ್ತ ಪರೀಕ್ಷೆ, ಸಿಟಿ ಸ್ಕ್ಯಾನ್, ಎಂಆರ್ಐ ಸ್ಕ್ಯಾನ್‌ಗಳಿಗೆ ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಹಾಗೂ ಒಂದು ಸ್ಕ್ಯಾನಿಂಗ್ ಕೇಂದ್ರದಿಂದ ಮತ್ತೊಂದು ಕೇಂದ್ರ ರೋಗಿಗಳು ಸಾಗಿಸಲು ಕಿಲೋ ಮೀಟರ್ ಒಳಗೆ ಹೋದರೆ 600 ಪೀಕುತ್ತಾನೆ. ಈತ ರೋಗಿಗಳ ತನ್ನ ಅಂಬುಲೆನ್ನಲ್ಲಿ ಸಾಗಿಸುವಾಗ 108 ವಾಹನಕ್ಕೆ ತುರ್ತು ಕರೆ ಬಂದರೆ ಆಗ ತೊಂದರೆ ಒಳಗಾಗದವರಗೆ ಸಕಾಲಕ್ಕೆ 108 ವಾಹನದ ಸೇವೆ ಸಿಗದೇ ಪರಿತಪಿಸಿ ಸರ್ಕಾರದ ನಿರ್ಲಕ್ಷ ದೋರಣೆ, ಅರೋಗ್ಯ ಇಲಾಖೆಯ ವಿರುದ್ಧ ಶಾಪ ಹಾಕುತ್ತಾರೆ. ಆದರೆ ಅಸಲಿಗೆ ಈ 108 ವಾಹನ ಚಾಲಕ ಹಣ ಕಮಾಯಿಸಲು ಅಡ್ಡದಾರಿ ಹಿಡಿದಿರುತ್ತಾನೆ.

108 ವಾಹನ ಚಾಲಕನ ಆಟಾಟೋಪದ ಕುರಿತು ಸಂಬಂಧಿಸಿದ ಆರೋಗ್ಯ ಇಲಾಖೆ ಹಾಗೂ 108 ವಾಹನ ನಿರ್ವಹಣೆ ಮಾಡುವ ಸಂಸ್ಥೆಯ ಅಧಿಕಾರಿಗಳಿಗೆ ಅಧಿಕೃತ ದೂರು ನೀಡಿದರು. ಮೇಲಾಧಿಕಾರಿಗಳು ಇದುವರೆಗೂ ಯಾವುದೇ ಕ್ರಮ ಜರುಗಿಸಿಲ್ಲ. ಇದರಿಂದ ಸ್ಥಳೀಯರು 108 ವಾಹನ ಚಾಲಕ ಆನಂದಯ್ಯ ತನ್ನ ಖಾಸಗಿ ವಾಹನದಿಂದ ಹಣ ಕಮಾಯಿಸಿ ಅದರಲ್ಲಿ ಮೇಲಾಧಿಕಾರಿಗಳಿ ಪಾಲು ನೀಡುತ್ತಾನೆ.

ಆದ್ದರಿಂದ ಆತನಿಗೆ ಇಂತಹ ಅವಕಾಶ ನೀಡಿದ್ದಾರೆ ಎಂದು ಮೇಲಾಧಿಕಾರಿಗಳು ವಿರುದ್ಧ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಕರವೇ ಮುಖಂಡರು ಆರೋಪವಾಗಿದೆ.

**"ಈಗಾಗಲೆ ಆನಂದಯ್ಯನ ಮೇಲೆ ಕ್ರಮ ಜರುಗಿಸಲು ಮೇಲಾ ಧಿಕಾರಿಗಳು ಮಾಹಿತಿ ನೀಡಿರುವೆ, ದೂರಿನಂತೆ ಮೇಲಾಧಿಕಾರಿಗಳು 108 ವಾಹನ ಚಾಲಕ ಆನಂದಯ್ಯನನ್ನು ವಿಚಾರಣೆಗೆ ಕರೆದಿದ್ದಾರೆ. ಆತನ ವಿಚಾರಣೆ ಬಳಿಕ ಕ್ರಮವಹಿಸುತ್ತಾರೆ".**

**– ಗಣೇಶ, ಜಿಲ್ಲಾ ವ್ಯವಸ್ಥಾಪಕ ಆರೋಗ್ಯ ರಕ್ಷ ಕವಚ ರಾಯಚೂರು**

**"108 ವಾಹನ ಸೇವೆಯಲ್ಲಿ ಅನೇಕ ಯಡವಟ್ಟುಗಳು ಆಗುತ್ತಿವೆ. ಯಾರಿಗೆ ದೂರು ನೀಡಬೇಕು ಎನ್ನುವುದು ಜನ ಸಾಮಾನ್ಯರಿಗೆ ಗೊತ್ತು ಆಗುತ್ತಿಲ್ಲ ಆದರೆ 108 ವಾಹನ ನಿರ್ವಹಣೆ ಹೊಣೆ ಹೊತ್ತವರ ಜಿಲ್ಲಾ ಮಟ್ಟದ ವ್ಯವಸ್ಥಾಪಕರ ಮೇಲೆ ಕ್ರಮ ಜರುಗಿಸಿ ಸ್ಥಳೀಯವಾಗಿ 108 ವಾಹನಗಳ ಸಮರ್ಪಕ ಸೇವೆ ಒದಗಿಸಬೇಕು".**

**– ಶಿವಪುತ್ರಗೌಡ ನಂದಿಹಾಳ, ಜಿಲ್ಲಾಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ, ರಾಯಚೂರು**

## ನೀರಿನ ಘಟಕ ಉದ್ಘಾಟನೆ : ಸದ್ಬಳಕೆಗೆ ಕರೆ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.17–** ಶುದ್ಧ ಕುಡಿಯುವ ನೀರಿನ ಬಳಕೆಯಿಂದ ಆರೋಗ್ಯ ಸದೃಢವಾಗಿರುತ್ತದೆ. ಮಳೆಗಾಳವಾದ್ದರಿಂದ ಸಾರ್ವಜನಿಕರು ಆದಷ್ಟು ಕುಡಿಯಲು ಶುದ್ಧೀಕರಿಸಿದ ನೀರು ಉಪಯೋಗಿಸಬೇಕೆಂದು ಶಾಸಕ ಮಾನಪ್ಪ ವಜ್ಜಲ್ ಕರೆ ನೀಡಿದರು.

ಪಟ್ಟಣದ ಬಸ್ ನಿಲ್ದಾಣ ಹಾಗೂ ಬಸ್ ಡೀಪೋದಲ್ಲಿ 2023-24ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಮೈಕ್ರೋ



ಯೋಜನೆ ಅನುದಾನದಲ್ಲಿ ನಿರ್ಮಿಸಿದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಉದ್ಘಾಟಿಸಿ ಮಾತನಾಡಿದರು.

ಘಟಕ ವ್ಯವಸ್ಥಾಪಕ ಪ್ರಕಾಶ್ ದೊಡ್ಡಮನಿ, ಪಿಐ ಪುಂಡಲೀಕ ಪಾಟಾತಾರ್, ಬಿಜೆಪಿ ಮಂಡಲ ಅಧ್ಯಕ್ಷ ಅಯ್ಯಪ್ಪ ಮಾಳೂರು, ಮುದಗಲ್ ಅಧ್ಯಕ್ಷ ಹುಲ್ಲೇಶ್ ಸಾಹುಕಾರ ಸೇರಿ ಸಾರಿಗೆ ಘಟಕದ ಅಧಿಕಾರಿಗಳು, ಪಕ್ಷದ ಮುಖಂಡರು ಇದ್ದರು.

## ಜೋಳ ಖರೀದಿ ಕೇಂದ್ರಗಳಿಗೆ ಹೆಚ್ಚಿನ ಲಾರಿಗಳ ಬೇಡಿಕೆ, ಅವಧಿ ವಿಸ್ತರಣೆಗೆ ಆಗ್ರಹ

ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.17–** ತಾಲ್ಲೂಕಿನಾದ್ಯಂತ ಸ್ಥಾಪಿಸಲಾಗಿರುವ ಜೋಳ ಖರೀದಿ ಕೇಂದ್ರಗಳಲ್ಲಿ ಲಾರಿಗಳ ಕೊರತೆ ಮತ್ತು ಖರೀದಿ ಅವಧಿಯನ್ನು ವಿಸ್ತರಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರೈತರು ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.ಪ್ರಸ್ತುತ ಜೋಳ ಸಾಗಣೆಗಾಗಿ ಕೇವಲ 2 ಲಾರಿಗಳು ಮಾತ್ರ ಲಭ್ಯವಿದ್ದು, ಇದು ರೈತರಲ್ಲಿ ಆತಂಕ ಮೂಡಿಸಿದೆ. ತಾಲ್ಲೂಕಿನ ವಿವಿಧ ಸಹಕಾರ ಸಂಘಗಳಲ್ಲಿರುವ ಜೋಳ ಖರೀದಿ ಕೇಂದ್ರಗಳಲ್ಲಿ ರೈತರಿಂದ ಜೋಳವನ್ನು ಖರೀದಿಸಿ ಲಾರಿಗಳ ಮೂಲಕ ಸಾಗಿಸಲಾಗುತ್ತಿದೆ. ಆದರೆ, ಕಳೆದ ಒಂದು ವಾರದಿಂದ 5-6 ಲಾರಿಗಳ ಬದಲಾಗಿ ಕೇವಲ 2 ಲಾರಿಗಳು ಮಾತ್ರ ಬರುತ್ತಿರುವುದು ರೈತರನ್ನು ಹತಾಶರನ್ನಾಗಿಸಿದೆ. ಜೂನ್ 30 ರವರೆಗೆ ಜೋಳ ಖರೀದಿ ಕೇಂದ್ರಗಳ ಅವಧಿಯನ್ನು ಸರ್ಕಾರ ವಿಸ್ತರಿಸಿದ್ದರೂ, ಕೇವಲ 2 ಲಾರಿಗಳ ಮೂಲಕ ಅಷ್ಟೂ ಜೋಳವನ್ನು ಸಾಗಿಸುವುದು ಅಸಾಧ್ಯ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ."8-10 ಲಾರಿಗಳಾದರೂ ಬೇಕು, ಇಲ್ಲದಿದ್ದರೆ ಜೋಳ ಖರೀದಿ ಪ್ರಕ್ರಿಯೆ ಸಾಧ್ಯವಿಲ್ಲ,"



ಎಂದು ರೈತರು ಒತ್ತಿ ಹೇಳಿದ್ದಾರೆ. ಲಾರಿ ಟೆಂಡರ್ ಪಡೆದ ಮಾಲೀಕರು ರೈತರಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂಬ ಆರೋಪವೂ ಕೇಳಿಬಂದಿದೆ.

ಜೂನ್ 30 ರ ಗಡುವಿನೊಳಗೆ ಲಭ್ಯವಿರುವ ಲಾರಿಗಳ ಮೂಲಕ ಸಂಪೂರ್ಣ ಜೋಳವನ್ನು ಸಾಗಿಸಲು ಸಾಧ್ಯವಿಲ್ಲ. ಇದರಿಂದಾಗಿ ಬಹಳಷ್ಟು ಜೋಳವು ಉಳಿದುಕೊಂಡು ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ ಎಂದು ರೈತರು ಕಳವಳ ವ್ಯಕ್ತಪಡಿಸಿದ್ದಾರೆ.

2ನೇ ಪುಟಕ್ಕೆ

ಯುವ ಮಾರ್ಗ



# ಮೊದಲನೇಯ ಪುಟದಿಂದ

## ಬಿಜೆಪಿಗೆ ರಾಜೀನಾಮೆ ಕೇಳುವ ನೈತಿಕ ಹಕ್ಕಿಲ್ಲ

ಬಿಜೆಪಿಯವರು ಕಾಲ್ತುಳಿತ ಘಟನೆಯನ್ನು ರಾಜಕಾರಣ ಮಾಡುತ್ತಿದ್ದಾರೆ. ಇವರಿಗೆ ನೈತಿಕತೆ ಇಲ್ಲ ಎಂದು ವಾಗ್ದಾಳಿ ನಡೆಸಿ, ಕುಂಭಮೇಳದ ಕಾಲ್ತುಳಿತದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿನಾಥ್ ರಾಜೀನಾಮೆ ಕೊಟ್ಟರಾ. ಇವರ ರಾಜೀನಾಮೆ ಕೇಳಿದ್ದರಾ ಎಂದು ಹರಿಹಾಯ್ದರು.

ಬಿಜೆಪಿಯವರು ರಾಜಕೀಯ ಕಾರಣಕ್ಕಾಗಿ ಈ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಟೀಕಿಸಿದರು ಪಟ್ಟಿ ಕೊಡಲಿ ದೇಶದಲ್ಲಿ ಈ ಮೊದಲು ನಡೆದಿರುವಂತಹ ಅವಘಡಗಳಿಗೆ ರಾಜೀನಾಮೆ ನೀಡಿರುವ ಬಿಜೆಪಿ ನಾಯಕರ ಪಟ್ಟಿಯನ್ನು ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಬಿಜೆಪಿ ನಾಯಕರಿಗೆ ಸವಾಲು ಹಾಕಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಬಿಜೆಪಿ ನಡೆಸಿರುವ ಪ್ರತಿಭಟನೆಗೆ ಕಿಡಿಕಾರಿ ಪತ್ರಿಕಾ ಹೇಳಿಕೆ ನೀಡಿರುವ ಅವರು, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದಿರುವುದು ಒಂದು ಅಪಘಾತವನ್ನು ಜವಾಬ್ದಾರಿಯತ ಸರ್ಕಾರವಾಗಿ ಆ ಘಟನೆಯನ್ನು ನಾವು ಹೊತ್ತಿದ್ದೇವೆ.

ಬೆಂಗಳೂರು ನಗರ ಪೊಲೀಸ್ ಆಯುಕ್ತರು ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿ ರಾಜ್ಯ ಗುಪ್ತಚರ ಇಲಾಖೆಯ ಮುಖ್ಯಸ್ಥರನ್ನು ವರ್ಗಾವಣೆ ಮಾಡಿದ್ದೇವೆ. ನನ್ನ ರಾಜಕೀಯ ಕಾರ್ಯದರ್ಶಿಯನ್ನು ಸೇವೆಯಿಂದ ಬಿಡುಗಡೆಗೊಳಿಸಿದ್ದೇನೆ. ಈ ಪ್ರಕರಣದ ಸಮಗ್ರ ತನಿಖೆಗೆ ನಿವೃತ್ತ ನ್ಯಾ. ಜಾನ್ ಮೈಕಲ್ ಖುನ್ಹಾ ಅವರ ನೇತೃತ್ವದ ಏಕ ಸದಸ್ಯ ಆಯೋಗ ರಚಿಸಿದ್ದೇ ಎಂದು ಸಿದ್ಧರಾಮಯ್ಯ ಹೇಳಿದ್ದಾರೆ.

ಇಷ್ಟೆಲ್ಲಾ ಕ್ರಮ ಕೈಗೊಂಡ ನಂತರವೂ ರಾಜ್ಯದ ಬಿಜೆಪಿ ನಾಯಕರು ಪ್ರತಿಭಟನೆ ನಡೆಸುತ್ತಿರುವುದು ರಾಜಕೀಯ ದುರುದ್ದೇಶದಿಂದ ಹೊರತು ಜನರ ಬಗ್ಗೆಗಿನ ಕಾಳಜಿಯಿಂದ ಅಲ್ಲ. ಸತ್ತ ಹೆಣಗಳ ಮೇಲಿನ ರಾಜಕೀಯ ಬಿಜೆಪಿ ಪಾಲಿಗೆ ಹೊಸದಲ್ಲ. ಅಪಘಾತ, ಹತ್ಯೆ, ದೌರ್ಜನ್ಯ ನಡೆದ ತಕ್ಷಣ ಸತ್ತ ಜೀವಗಳನ್ನು ಹುಡುಕಿಕೊಂಡು ಹೋಗುವ ರಣಹದ್ದುಗಳಂತೆ ಎರಗಿ ಬೀಳುವುದು ಬಿಜೆಪಿಯ ರಕ್ತದಲ್ಲೇ ಇದೆ. ತಮ್ಮ ಊಟದ ಎಲೆಯ ಮೇಲೆ ಆನೆ ಸತ್ತು ಬಿದ್ದಿದ್ದರೂ ಜತೆಗಿದ್ದವರ ಎಲೆ ಮೇಲೆ ಸತ್ತ ಬಿದ್ದ ನೊಣದ ಕಡೆ ಬೊಟ್ಟು ಮಾಡುವುದು ಬಿಜೆಪಿಯ ಹಳೆಯ ಛಾಳಿ ಎಂಬುದನ್ನು ರಾಜ್ಯದ ಜನತೆ ಅರ್ಥ ಮಾಡಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದ್ದಾರೆ.

ಬಿಜೆಪಿ ನಾಯಕರು ಪ್ರತಿಭಟನೆಯಂತಹ ಬೀದಿ ಪ್ರಸಂಗವನ್ನು ಕೈಬಿಟ್ಟು ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಲಿ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ತಿಳಿಸಿದ್ದಾರೆ.

## ತೀವ್ರ ಅತಿಸಾರ ಬೇಧಿ ನಿಯಂತ್ರಿಸಲು ಜನರಲ್ಲಿ ಜಾಗೃತಿ ಮೂಡಿಸಿ

ಅತಿಸಾರ ಬೇಧಿಯಿಂದ ಯಾವುದೇ ಮಕ್ಕಳು ಮರಣವಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದರು.

ಸಿಇಓ ಅವರಿಂದ ಅಭಿನಂದನೆ: ರಾಯಚೂರು ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯ ವೈದ್ಯರು ಹಾಗೂ ಸಿಬ್ಬಂದಿಯು ಹಗಲು ರಾತ್ರಿ ಸಾರ್ವಜನಿಕರಿಗೆ ವೈದ್ಯಕೀಯ ಸೇವೆ ಉತ್ತಮ ರೀತಿಯಲ್ಲಿ ನೀಡುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸಿದರು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸೇವೆ ಸಲ್ಲಿಸಬೇಕು ಎಂದು ಸಲಹೆ ನೀಡಿದರು.

ಮಕ್ಕಳ ತಜ್ಞರಾದ ಡಾ.ಸಂಜೀವ ಚಟ್ಟಿ ಅವರು ಮಾತನಾಡಿ, 0–5 ವರ್ಷದ ಮಕ್ಕಳಲ್ಲಿ ತೀವ್ರತರ ಅತೀಸಾರ ಬೇಧಿ ಆದಲ್ಲಿ ಮಕ್ಕಳು ನಿರ್ಜಲೀಕರಣಕ್ಕೆ ಒಳಗಾಗಿ ತುಂಬಾ ತೊಂದರೆ ಅನುಭವಿಸುತ್ತವೆ. ಅಂತಹ ಸಮಯದಲ್ಲಿ ಓ.ಆರ್.ಎಸ್ ದ್ರಾವಣ ಮತ್ತು ಜಿಂಕ್ ಔಷಧಿ ಬಳಸಬೇಕು. ಹಾಗೂ ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ಕರೆತರಲು ತಿಳಿಸಿದರು.

ಇದೆ ವೇಳೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಅತಿಸಾರ ಬೇಧಿ ನಿಯಂತ್ರಣ ಕಾರ್ಯಕ್ರಮದ ಭಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿದರು.

ಇದೆ ವೇಳೆ ಸಿಇಓ ಅವರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಸಭೆ ನಡೆಸಿ, ಎನ್.ಹೆಚ್.ಎಂ ಯೋಜನೆಯಡಿ ವಿವಿಧ ಕಾರ್ಯಕ್ರಮಗಳ ಆರ್ಥಿಕ ಹಾಗೂ ಭೌತಿಕ ಪ್ರಗತಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸುರೇಂದ್ರ ಬಾಬು, ಡಾ.ವಿಜಯ ಶಂಕರ, ಡಾ. ನಂದಿತಾ, ಕೆ.ಡಿ ಬಡಿಗೇರ, ನವೀನ್, ಜಿಲ್ಲಾ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಆರ್.ಬಿ.ಎಸ್.ಕೆ ವೈದ್ಯಾಧಿಕಾರಿಗಳು, ಅಂಗನವಾಡಿ ಮೇಲ್ವಿಚಾರಕರು, ಆರೋಗ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

## ಜೋಳ ಖರೀದಿ ಕೇಂದ್ರಗಳಿಗೆ ಹೆಚ್ಚಿನ ಲಾರಿಗಳ ಬೇಡಿಕೆ, ಅವಧಿ ವಿಸ್ತರಣೆಗೆ ಆಗ್ರಹ

ಈ ಹಿನ್ನೆಲೆಯಲ್ಲಿ, ರೈತರು ಜೋಳ ಖರೀದಿ ಅವಧಿಯನ್ನು ಜೂನ್ 30 ರಿಂದ ಜುಲೈ 30 ರವರೆಗೆ ವಿಸ್ತರಿಸುವಂತೆ ಮತ್ತು ಜೋಳ ಸಾಗಣೆಗಾಗಿ ಹೆಚ್ಚುವರಿ ಲಾರಿಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಈ ಕೂಡಲೇ ಸರ್ಕಾರವು ಈ ಸಮಸ್ಯೆಗೆ ಸ್ಪಂದಿಸಿ ರೈತರಿಗೆ ನೆರವಾಗಬೇಕೆಂದು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ದುರುಗಪ್ಪ ತಡಕಲ್,ಆಯ್ಯನಗೌಡ್ರು,ಭೀಮಣ್ಣ ಮರೆಡ್ಡಿ, ಬಾಯನಗೌಡ್ರು, ಲಕ್ಷಿಪತಿ,ಅಯ್ಯನಗೌಡ್ರು,ಶರಣಪ್ಪ ಗಿರಡ್ಡಿ ವೀರೇಶ್,ಹನುಮಂತ ಯಾದವ್,ಸೀನಪ್ಪ ಯಾದವ್,ದೊಡ್ಡ ದುರುಗಪ್ಪ ಇದ್ದರು

## ಪೊಲೀಸ್‌ನಿಂದಲೇ ಹನಿಟ್ರ್ಯಾಪ್ ದಂಧೆ!

**ಮೈಸೂರು, ಜೂ. 17–** ಹನಿಟ್ರ್ಯಾಪ್ ಹೆಸರಲ್ಲಿ ದೊಡ್ಡ ಉದ್ಯಮಿಗಳು, ಅಧಿಕಾರಿಗಳನ್ನು ಬಲೆಗೆ ಬೀಳಿಸಿಕೊಳ್ಳುವುದನ್ನು ಕೇಳಿರುತ್ತಿರಾ.. ಆದರೆ ದುಷ್ಟರನ್ನು ಶಿಕ್ಷಿಸಬೇಕಾದ ಪೊಲೀಸಪ್ಪನೇ ಇಂಥ ಹೀನಕೃತ್ಯದಲ್ಲಿ ತೊಡಗಿರುವ ಹೇಯ ಘಟನೆ ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನಲ್ಲಿ ನಡೆದಿದೆ. ಕಾನ್‌ಸ್ಟೆಬಲ್ ಶಿವಣ್ಣ ಬಂಧಿತ ಆರೋಪಿ. ಸುಂದರ ಯುವತಿಯರನ್ನು ಮುಂದೆ ಬಿಟ್ಟು ಹಣ ಉಳ್ಳವರನ್ನು ಬಲೆ ಬೀಳಿಸುತ್ತಿದ್ದ ಎಂದು ಹೇಳಲಾಗಿದೆ.

ಇದೇ ರೀತಿ ಕಂಪಲಾಪುರದ ಬಟ್ಟೆ ವ್ಯಾಪಾರಿ ದಿನೇಶ್‌ಕುಮಾರ್ ಎಂಬುವರನ್ನು ಹನಿಟ್ರ್ಯಾಪ್‌ಗೆ ಒಳಪಡಿಸಿದ್ದಾರೆ. ಯುವತಿಯೊಬ್ಬಳನ್ನು ಮುಂದೆ ಬಿಟ್ಟು ಬಟ್ಟೆ ವ್ಯಾಪಾರಿಯನ್ನು ವಾಟ್ಸ್ಯಾಪ್ ಮೂಲಕ ಬಲೆಗೆ ಬೀಳಿಸಿಕೊಂಡಿದ್ದಾರೆ. ತಾನು ಚಿಕ್ಕಮನ ಮನೆಯಲ್ಲಿದ್ದೇನೆ. ಇಲ್ಲಿ ಯಾರೂ ಇಲ್ಲ ಬಾ ಎಂದು ಯುವತಿ ಸಂದೇಶ ರವಾನಿಸಿದ್ದಾಳೆ. ಮೆಸೇಜ್ ನೋಡಿ ಖುಷಿಯಾದ ವ್ಯಾಪಾರಿ ದಿನೇಶ್‌ಕುಮಾರ್ ಯುವತಿಯ ಚಿಕ್ಕಮನ ಮನೆಗೆ ಬಂದಿದ್ದಾನೆ. ತಕ್ಷಣ ಆತನನ್ನು ಲಾಕ್ ಮಾಡಿಕೊಂಡಿದ್ದಾಳೆ.

ರೂಮ್ ಒಳಗೆ ಇರುವಾಗಲೇ ಏಕಾಏಕಿ ಕೊಠಡಿಯಬೀಗ ಒಡೆದು ಒಳ ಬಂದ ಇತರ ಆರೋಪಿಗಳು ವ್ಯಾಪಾರಿ ದಿನೇಶ್‌ಗೆ ಥಳಿಸಿ, 10 ಲಕ್ಷ ಹಣ ನೀಡಿದರೆ ಬಿಟ್ಟು



ಬಿಡುವುದಾಗಿ ಬ್ಲಾಕ್‌ಮೇಲ್ ಮಾಡಿದ್ದಾರೆ.

ಬಳಿಕ ಪೊಲೀಸ್ ಪೇದೆ ಶಿವಣ್ಣನ ಸಹಾಯ ಪಡೆದು ಮೊದಲ ಆರೋಪಿ ಮೂರ್ತಿ ಹಾಗೂ ಯುವತಿ ಅಲ್ಲಿಂದ ನಾಪತ್ತೆಯಾಗಿದ್ದಾರೆ. ಪ್ರಕರಣದಲ್ಲಿ ಎ1 ಆರೋಪಿ ಮೂರ್ತಿ, ಎ2 ಆರೋಪಿ ಕಾನ್‌ಸ್ಟೆಬಲ್ ಶಿವಣ್ಣ ಹಾಗು ಇತರ ಮೂವರಿಂದ ಈ ಕೃತ್ಯ ನಡೆಸಲಾಗಿದೆ. ಈ ಸಂಬಂಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇನ್‌ಸ್ಪೆಪೆಕ್ಟರ್ ದೀಪಕ್ ಅವರು ಕ್ರಮ ಕೈಗೊಂಡು ಪೊಲೀಸ್ ಸಿಬ್ಬಂದಿಯನ್ನು ಬಂಧಿಸಿದ್ದಾರೆ.

# ರಾಜ್ಯದಲ್ಲಿ ಥಗ್ ಲೈಫ್ ಬಿಡುಗಡೆ ಸುಪ್ರೀಂ ಸೂಚನೆ

**ನವದೆಹಲಿ, ಜೂ.17–** ಕರ್ನಾಟಕದಲ್ಲಿ ತಮಿಳು ಚಿತ್ರ 'ಥಗ್ ಲೈಫ್' ಮೇಲೆ ಹೇರಲಾದ ನಿಷೇಧಕ್ಕೆ ಸುಪ್ರೀಂ ಕೋರ್ಟ್ ಅಸಮ್ಮತಿ ವ್ಯಕ್ತಪಡಿಸಿ, ಚಿತ್ರ ಬಿಡುಗಡೆಗೆ ಸೂಚನೆ ನೀಡಿದೆ.

ಚಿತ್ರ ಇಷ್ಟವಿಲ್ಲದಿದ್ದರೆ ನೋಡಬೇಡಿ. ಆದರೆ ಗುಂಪುಗಳು ಚಿತ್ರ ಬಿಡುಗಡೆ ತಡೆಯುವುದು ಸರಿಯಲ್ಲ.ಥಗ್ ಲೈಫ್ ಚಿತ್ರ ಬಿಡುಗಡೆ ಬಗ್ಗೆ ಅಭಿಪ್ರಾಯ ತಿಳಿಸಲು ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಒಂದು ದಿನದ ಗಡುವು ನೀಡಿದೆ.

ತಮಿಳು ನಟ ಕಮಲ್ ಹಾಸನ್ ಅಭಿನಯದ 'ಥಗ್ ಲೈಫ್' ಸಿನಿಮಾ ಬಿಡುಗಡೆ ಮಾಡುವಂತೆ ಸೂಚಿಸಿದ್ದು ಯಾವುದೇ ಗುಂಪುಗಳು ಅಧಿಕಾರ ಚಲಾಯಿಸಲು ಸಾಧ್ಯವಿಲ್ಲ .ಇದನ್ನು ಖಾತರಿ ಪಡಿಸುವುದು ರಾಜ್ಯ ಸರ್ಕಾರಕ್ಕೆ ಸೇರಿದ್ದು ಎಂದು ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ತಮಿಳು ನಿರ್ದೇಶಕ ಮಣಿರತ್ನಂ ನಿರ್ದೇಶನದ ಚಿತ್ರದಲ್ಲಿ ಕಮಲ್ ಹಾಸನ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಮಹೇಶ್ ರೆಡ್ಡಿ ಎನ್ನುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಕೈಗೆತ್ತಿಕೊಂಡ ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ಮನಮೋಹನ್ ಅವರನ್ನೊಳಗೊಂಡ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಥಗ್ ಲೈಫ್ ಚಿತ್ರ ಪ್ರದರ್ಶನ ತಡೆಯುವುದಾಗಿ ಹಲವು ಗುಂಪುಗಳು ಬೆದರಿಕೆ ಹಾಕಿದ ನಂತರ ಚಿತ್ರ ಬಿಡುಗಡೆಯಾಗಲಿಲ್ಲ. ನಾಯಕ ನಟ ಮತ್ತು ಚಿತ್ರದ ನಿರ್ಮಾಪಕರಲ್ಲಿ ಒಬ್ಬರಾದ ಕಮಲ್ ಹಾಸನ್ ಅವರು ಕನ್ನಡ ತಮಿಳಿನಿಂದ ಹುಟ್ಟಿದೆ' ಎಂಬ ಹೇಳಿಕೆ ಯಿಂದ ವಿವಾದ ಸೃಷ್ಟಿಯಾಗಿತ್ತು.ಇದರಿಂದ ಕೆರಳಿದ ಕನ್ನಡ ಪರ ಸಂಘಟನೆಗಳು ಚಿತ್ರ ಬಿಡುಗಡೆಗೆ ಅಡ್ಡಿಪಡಿಸಿದ್ದವು.

ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಭುಯಾನ್ ಅವರು ಕರ್ನಾಟಕ ರಾಜ್ಯದ ಕಾನೂನು ಪ್ರತಿನಿಧಿಗೆ ಮೌಖಿಕವಾಗಿ



ಮಾಹಿತಿ ನೀಡಿ, ಚಿತ್ರ ಬಿಡುಗಡೆಗೆ ಸೂಚನೆ ನೀಡಿದೆ.

ಗುರುವಾರ ವಿಚಾರಣೆ

ಥಗ್ ಲೈಫ್ ಚಿತ್ರದ ವಿಚಾರಣೆಯನ್ನು ಗುರುವಾರ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದ ನ್ಯಾಯ ಪೀಠ, ರಾಜ್ಯ ಸರ್ಕಾರ ನಾಳೆಯೊಳಗೆ ತನ್ನ ಹೇಳಿಕೆ ತಿಳಿಸಬೇಕು ಎಂದು ಕರ್ನಾಟಕ ಸರ್ಕಾರಕ್ಕೆ ಸೂಚಿಸಿದೆ.

ಸಿಬಿಎಫ್‌ಸಿ ಪ್ರಮಾಣಪತ್ರ ಹೊಂದಿರುವ ಯಾವುದೇ ಚಿತ್ರವನ್ನು ಬಿಡುಗಡೆ ಮಾಡಬೇಕು ಮತ್ತು ರಾಜ್ಯ ಸರ್ಕಾರ ಅದರ ಪ್ರದರ್ಶನವನ್ನು ಖಚಿತಪಡಿಸಿಕೊಳ್ಳಬೇಕು ಎಂಬುದು ಕಾನೂನಿನ ನಿಯಮ. ಚಿತ್ರಮಂದಿರಗಳನ್ನು ಸುಡುವ ಭಯದಿಂದ ಚಿತ್ರವನ್ನು ಪ್ರದರ್ಶಿಸಲು ಸಾಧ್ಯವಿಲ್ಲ ಎಂದು ಹೇಳುವುದು ಸರಿಯಲ್ಲ ಎಂದಿ ನ್ಯಾಯಪೀಠ ಹೇಳಿದೆ.

ಚಿತ್ರ ಬಿಡುಗಡೆ ಸಂಬಂಧ ಯಾವುದೇ ಆದೇಶವನ್ನು ಹೊರಡಿಸುತ್ತಿಲ್ಲ. ಆದರೆ ಚಿತ್ರವನ್ನು ಬಿಡುಗಡೆ ಮಾಡಬೇಕು' ಎಂದು ನ್ಯಾಯಮೂರ್ತಿ ಮನಮೋಹನ್ ಹೇಳಿದ್ದಾರೆ.

## ನೈಸರ್ಗಿಕ ಸಂಪನ್ಮೂಲ ಬಳಕೆಯಿಂದ ಪರಿಸರ ನಾಶ: ಖಂಡ್ರೆ



**ಬೆಂಗಳೂರು,ಜೂ.17:**ಐಷಾರಾಮಿ ಜೀವನಕ್ಕಾಗಿ ನಾವು ಅತಿಯಾಗಿ ನೈಸರ್ಗಿಕ ಸಂಪನ್ಮೂಲ ಬಳಸುತ್ತಿದ್ದು, ಪರಿಸರ ನಾಶವಾಗುತ್ತಿದೆ ಎಂದು ಅರಣ್ಯ ಸಚಿವ ಈಶ್ವರಖಂಡ್ರೆ ವಿಷಾದಿಸಿದ್ದಾರೆ.

ವಿಶ್ವ ಪರಿಸರ ದಿನದ ಅಂಗವಾಗಿ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್‌ರೊಂದಿಗೆ ಸೇರಿ ಪರಿಸರ ನಡಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಪೂರ್ವಜರು ನೈಸರ್ಗಿಕ ಸಂಪನ್ಮೂಲವನ್ನು ಹಿತಮಿತವಾಗಿ ಬಳಸುತ್ತಿದ್ದರು. ಆದರೆ, ನಾವು ಇಂದು ಐಷಾರಾಮಿ ಜೀವನಕ್ಕಾಗಿ ಅತಿಯಾಗಿ ಸಂಪನ್ಮೂಲ ಬಳಸಿ ಪರಿಸರ ನಾಶಕ್ಕೆ ಕಾರಣರಾಗುತ್ತಿದ್ದೇವೆ ಎಂದರು.

ನೈಸರ್ಗಿಕ ಸಂಪನ್ಮೂಲ ಹಿತಮಿತ ಬಳಕೆ ಇಂದಿನ ಅಗತ್ಯವಾಗಿದೆ ಎಂದು ಅವರು ಪ್ರತಿಪಾದಿಸಿದರು. ಜಗತ್ತಿನಲ್ಲಿಂದು ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನ ಏರಿಕೆಯಾಗಿದೆ. ಇದಕ್ಕೆ ವೃಕ್ಷ, ಅರಣ್ಯ ನಾಶ ಹಾಗೂ ನಮ್ಮ ಜೀವನ ಶೈಲಿಯೇ ಕಾರಣವಾಗಿದೆ ಎಂದು ಅವರು ಹೇಳಿದರು.

ಪ್ರತಿಯೊಬ್ಬರು ಒಂದು ಗಿಡ ನೆಟ್ಟು ಹಸಿರು ಹೊದಿಕೆ ಹೆಚ್ಚಿಸಿದರೆ ಹವಾಮಾನ ಬದಲಾವಣೆಯ ಪರಿಣಾಮ ತಗ್ಗಿಸಬಹುದು ಎಂದು ಅವರು ಹೇಳಿದರು.

ಏಕ ಬಳಕೆ ಪ್ಲಾಸ್ಟಿಕ್‌ನ್ನು ನಿಷೇಧಿಸಲಾಗಿದೆ. ಆದರೂ ಏಕ ಬಳಕೆ ಪ್ಲಾಸ್ಟಿಕ್ ಬಳಕೆ ನಿಂತಿಲ್ಲ, ಏಕ ಬಳಕೆ ಪ್ಲಾಸ್ಟಿಕ್ ಬಳಸುವುದಿಲ್ಲ ಎಂದು ನಾವೆಲ್ಲ ಸಂಕಲ್ಪ ಮಾಡಬೇಕಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ರಾಜ್ಯ ಮಾಲಿನ್ಯ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಪಿ.ಎಂ ನರೇಂದ್ರಸ್ವಾಮಿ, ಶಾಸಕ ರಿಜ್ವಾನ್ ಅರ್ಷದ್ ಮತ್ತಿತರರು ಉಪಸ್ಥಿತರಿದ್ದರು.

## ಮಾಜಿ ಪ್ರಧಾನಿ ದೇವೇಗೌಡರಿಗೆ ಗಂಗಸಾಮ್ರಾಟ ಶ್ರೀ ಪುರುಷ ಪ್ರಶಸ್ತಿ

**ಬೆಂಗಳೂರು,ಜೂ.17–** ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರಿಗೆ ಗಂಗ ಸಾಮ್ರಾಟ ಶ್ರೀಪುರುಷ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಎಚ್.ಡಿ.ದೇವೇಗೌಡ ಅಭಿನಂದನಾ ಸಮಿತಿ ವತಿಯಿಂದ ಜೂ.22ರಂದು ಮಧ್ಯಾಹ್ನ 2 ಗಂಟೆಗೆ ಡಾ.ಬಾಬುಜಗಜೀವನ್‌ರಾಮ್ ಭವನದಲ್ಲಿ ಈ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಅಂದು ಪ್ರಶಸ್ತಿ ಪ್ರದಾನದ ಜೊತೆಗೆ ಎಚ್.ಡಿ.ದೇವೇಗೌಡ ಅವರ ಬದುಕು ಮತ್ತು ಸಾಧನೆ ಪುಸ್ತಕದ ಜನಾರ್ಪಣೆ ಮಾಡಲಾಗುತ್ತದೆ ಮತ್ತು 93 ವಿವಿಧ ಸಾಧಕರಿಗೆ ಎಚ್.ಡಿ.ದೇವೇಗೌಡ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಡಾ.ಶ್ರೀ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಪೀಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಕ್ಷೇತ್ರದ ಪೀಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಸ್ಪಟಿಕಪುರಿ ಮಹಾಸಂಸ್ಥಾನದ ಶ್ರೀ ನಂಜಾವಧೂತ ಸ್ವಾಮೀಜಿ, ತುಮಕೂರಿನ ರಾಮಕೃಷ್ಣಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ, ಆದಿಚುಂಚನಗಿರಿ ಮಠದ ವಿಜಯನಗರ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ, ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರುಗಳು ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

# ‘ಕಡೆಗಣಿಸದಿರಿ ಹಿರಿಯರ ಜಾಣ್ಮೆಯನು’

**ತು**ಸು ವಯಸ್ಸಾದ ಹೆಣ್ಣು ಮಗಳು ಆ ಬ್ಯಾಂಕಿನ ಶಾಖೆಯೊಂದಕ್ಕೆ ನಿಧಾನವಾಗಿ ನಡೆಯುತ್ತಾ ಬಂದರು. ಬ್ಯಾಂಕಿನ ತನ್ನ ಖಾತೆಯಿಂದ ಸ್ವಲ್ಪ ಹಣವನ್ನು ಬಿಡಿಸಿಕೊಂಡು ಹೋಗಲು ಆಕೆ ಬಂದಿದ್ದರು. ಎರಡು ನೂರು ರೂಗಳಿಗೆ ಆಕೆ ಚೆಕ್ ಬರೆದಿದ್ದರು. ಹಣ ಪಾವತಿ ಸ್ಥಳದಲ್ಲಿ ಕುಳಿತುಕೊಂಡಿದ್ದ ಬ್ಯಾಂಕ್ ನ ಉದ್ಯೋಗಿ ಯಾದ ಓರ್ವ ಹೆಣ್ಣು ಮಗಳು

ವಯಸ್ಸಾದ ಅಜ್ಜಿ ಕೌಂಟರ್ ಬಳಿ ಬರುತ್ತಲೇ ಏನು ಬೇಕು? ಎಂದು ತುಸು ಅಸಹನೆಯಿಂದ ಕೇಳಿದಳು. ಅಜ್ಜಿ ತನ್ನ ಚೆಕ್ಕನ್ನು ಆಕೆಯ ಕೈಗೆ ಕೊಡುತ್ತಲೇ ಇಷ್ಟು ಚಿಕ್ಕ ಪುಟ್ಟ ಅಮೌಂಟ್ಗೆ ನೀವು ಇಲ್ಲಿಗೆ ಬರಲೇಬಾರದು. ಎಟಿಎಂ ಮಷೀನ್‌ಗಳಲ್ಲಿ ನೀವು ಹಣ ಪಡೆದುಕೊಂಡರೆ ಒಳ್ಳೆಯದು... ನಿಮ್ಮಿಂದಾಗಿ ಉಳಿದ ಗ್ರಾಹಕರಿಗೆ ತಡವಾಗುತ್ತದೆ ಎಂದು ತುಸು ಒರಟಾಗಿಯೇ ಹೇಳಿದಳು. ಈಗಾಗಲೇ ಸಾಕಷ್ಟು ಗ್ರಾಹಕರೊಂದಿಗೆ ಆಕೆ ಸಣ್ಣಪುಟ್ಟ ವಾದಗಳನ್ನು ಮಾಡುತ್ತಲೇ ಇದ್ದದ್ದನ್ನು ಅಜ್ಜಿ ಗಮನಿಸಿದ್ದರು.

ಒಂದು ಕ್ಷಣ ಸುಮ್ಮನೆ ನಿಂತಿದ್ದ ವೃದ್ಧ ಮಹಿಳೆ ನಂತರ ಸಮಾಧಾನದಿಂದ ಒಂದೊಂದೇ ಪದಗಳನ್ನು ಅಳೆದು ತೂಗಿ ತನ್ನ ಪಾಸ್ ಬುಕ್ ಅನ್ನು ಆಕೆಯ ಕೈಯಲ್ಲಿಡುತ್ತಾ ಹಾಗಾದರೆ ನೀವು ನನ್ನ ಅಕೌಂಟ್ ನಲ್ಲಿರುವ ಎಲ್ಲಾ ಹಣವನ್ನು ನನಗೆ ತೆಗೆಸಿಕೊಡಿ... ತುಂಬಾ ಉಪಕಾರವಾಗುತ್ತದೆ ಎಂದು ಹೇಳಿ ವಿನಯದಿಂದ ಕೈಕಟ್ಟಿ ನಿಂತರು.

ಗೆದ್ದ ಹೆಮ್ಮೆಯಿಂದ ಆ ಹೆಣ್ಣು ಮಗಳು ವೃದ್ದೆಯ ಪಾಸ್ ಬುಕ್ ಇಸಿದುಕೊಂಡು ನಿಧಾನವಾಗಿ ಅದರ ಪುಟ

ತಿರುಗಿಸಿದಳು. ಒಂದು ಕ್ಷಣ ಆಕೆಯ ಎದೆ ಬಡಿತ ನಿಂತಂತಾಯಿತು. ಹಣೆಯಲ್ಲಿ ಬೆವರು ಸಾಲುಗಟ್ಟಿತು. ವೃದ್ದೆಯ ಅಕೌಂಟಿನಲ್ಲಿ 5 ಕೋಟಿಗಿಂತಲೂ ಹೆಚ್ಚು ಹಣ ಜಮಾ ಇತ್ತು. ನಿಧಾನವಾಗಿ ಎದ್ದು ನಿಂತ ಆಕೆ "ಮೇಡಂ,ಸದ್ಯಕ್ಕೆ ನಮ್ಮ ಬ್ಯಾಂಕಿನಲ್ಲಿ ಅಷ್ಟೊಂದು ಹಣ ಇಲ್ಲ.... ನೀವು ನಿಮ್ಮ ಅಕೌಂಟ್ನಲ್ಲಿರುವ ಹಣವನ್ನು ತೆಗೆಸಲು ಬ್ಯಾಂಕಿನ ಮೇಲಧಿಕಾರಿಗಳಿಗೆ ವಿಶೇಷವಾಗಿ ಪತ್ರ ಬರೆಯಬೇಕಾಗುತ್ತದೆ ಮತ್ತು ಇನ್ನೊಮ್ಮೆ ಬ್ಯಾಂಕಿಗೆ ಬರಬೇಕಾಗುತ್ತದೆ" ಎಂದು ಹೇಳಿದಳು.

ಓ! ಹೌದೇ, ಹಾಗಾದರೆ ಎಷ್ಟು ಹಣವನ್ನು ನಾನು ಈಗ ನನ್ನ ಖಾತೆಯಿಂದ ತೆಗೆಯಬಹುದು? ಎಂದು ಮೆಲುನಗೆ ನಗುತ್ತಾ ವೃದ್ಧ ಹೆಣ್ಣು ಮಗಳು ಕೇಳಿದರು.

ಆಗ ಬ್ಯಾಂಕಿನ ಯುವತಿ ನೀವು ಐದು ಲಕ್ಷದವರೆಗೂ ಹಣವನ್ನು ತೆಗೆಯಬಹುದು ಎಂದು ಅತ್ಯಂತ ವಿನೀತಳಾಗಿ ಹೇಳಿದಳು.

"ಒಳ್ಳೆಯದು ಹಾಗಾದರೆ ನನಗೆ 5 ಲಕ್ಷ ಹಣವನ್ನೇ ನನ್ನ ಖಾತೆಯಿಂದ ತೆಗೆದುಕೊಡಿ" ಎಂದು ಹೇಳಿದರು.

ವಿಪರೀತ ಮುಜುಗರದಿಂದ ಬ್ಯಾಂಕಿನ ಅಧಿಕಾರಿ ಹಣ ಎಣಿಸಲು ಆರಂಭಿಸಿ ಅಂತಿಮವಾಗಿ ಕೆಲ ನಿಮಿಷಗಳ ನಂತರ ವೃದ್ದೆಯ ಕೈಯಲ್ಲಿ ಹಣವನ್ನಿಟ್ಟು " ಮತ್ತೆ ತಮಗೆ ಏನಾದರೂ ಸಹಾಯ ಬೇಕೆ? " ಎಂದು ಕೇಳಿದಳು.

ವೃದ್ಧೆ ತನ್ನ ಹಣದಿಂದ ಕೇವಲ ಎರಡು ನೂರು ಹಣವನ್ನು ತೆಗೆದುಕೊಂಡು ಈ ಉಳಿದ ಹಣವನ್ನು ನಾನು ಮತ್ತೆ ನನ್ನ ಖಾತೆಗೆ ಡೆಪಾಸಿಟ್ ಮಾಡ ಬಯಸುತ್ತೇನೆ ಎಂದು ಹೇಳಿ ಆ ಹಣವನ್ನು ಮರಳಿ ಆಕೆಯ ಕೈಗೆ ಕೊಟ್ಟಳು. ಯುವತಿ ತಲೆ ತಗ್ಗಿಸಿದರೆ ಅಜ್ಜಿಯ ಮುಖದಲ್ಲಿ ಗೆಲುವಿನ ನಗೆ ಇತ್ತು.

ತುಂಬಾ ವರ್ಷಗಳ ಹಿಂದೆ ಕೇಳಿದ ಈ ಕಥೆ ನಮಗೆ ಬದುಕಿನ ಅತ್ಯಂತ ಕಹಿ ಸತ್ಯವಾದ ಅನಾವರಣವನ್ನು ಮಾಡುತ್ತದೆ. ಎಷ್ಟೋ ಬಾರಿ ದೊಡ್ಡ ದೊಡ್ಡ ಕಾರುಗಳಲ್ಲಿ ಬರುವವರನ್ನು, ಮಹಲುಗಳಲ್ಲಿ ವಾಸಿಸುವವರನ್ನು ಬೆಲೆಬಾಳುವ ಉಡುಪುಗಳನ್ನು ಧರಿಸುವವರನ್ನು ಕಂಡರೆ ನಾವು ಕೆಂಪು ರತ್ನಗಂಬಳಿಯನ್ನು ಹಾಸಿ ಸ್ವಾಗತಿಸುತ್ತೇವೆ. ಅದೇ ಆ ವ್ಯಕ್ತಿಗಳು ಸಾಮಾನ್ಯ ಮನುಷ್ಯರಂತೆ ಜೀವಿಸುತ್ತಿದ್ದರೆ ಅಚ್ಚರಿ ಪಡುತ್ತೇವೆ. ಆದರೆ ಓರ್ವ ಬಡ ವ್ಯಕ್ತಿಯನ್ನು ನಿಕೃಷ್ಟವಾಗಿ ಕಾಣುತ್ತೇವೆ. ಶ್ರೀಮಂತನೇ ಇರಲಿ ಬಡವನೇ ಇರಲಿ ನಾವು ಅವರಲ್ಲಿ ಗುರುತಿಸಬೇಕಾಗಿರುವುದು ಅವರಲ್ಲಿರುವ ಒಳ್ಳೆಯ ಗುಣಗಳನ್ನು ಮಾತ್ರ.

ಹೊಲದಲ್ಲಿ ಕೆಲಸ ಮಾಡುವ ರೈತ ಸೂಟು ಬೂಟು ಹಾಕಿಕೊಳ್ಳಲು ಆಗುವುದಿಲ್ಲ, ಆದರೆ ಆತನ ಕೆಲಸಕ್ಕೆ ನಮಗೆಲ್ಲ ಊಟ ನೀಡುವ ಯೋಗ್ಯತೆ ಇದೆ. ಆತನ ಬೆವರಿನ ಫಲವನ್ನು ನಾವು ಉಣ್ಣುತ್ತೇವೆ. ಪರಮೋತ್ಕೃಷ್ಟವಾದ ವೃತ್ತಿ ಆತನದು. ತಾನು ಬೆವರು ಸುರಿಸಿ ಹಗಲಿರುಳು ದುಡಿದು ನಮ್ಮ ಹೊಟ್ಟೆಗೆ ಅನ್ನ ಕಾಣಿಸುವ ರೈತ ಭೂಮಿಯ ಮೇಲಿನ ಭಗವಂತನೇ ಸರಿ. ಆತನ ವ್ಯಕ್ತಿಗೂ ಆತನ ದಿರಿಸಿಗೂ ಯಾವುದೇ ಸಂಬಂಧ ಜೋಡಿಸದಿರಿ.

ಇನ್ನು ಮೆಕ್ಯಾನಿಕ್ ಕೆಲಸ ಮಾಡುವವರು, ರಸ್ತೆಯ ಕಸ ಗುಡಿಸುವ, ಚರಂಡಿಗಳನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕರು ಧರಿಸುವ ಬಟ್ಟೆಗಳು ಅವರ ಕೆಲಸಕ್ಕೆ ಬೇಕಾದ ಗಟ್ಟಿಮುಟ್ಟಾದ ಮತ್ತು ಕೊಳೆ ಅಷ್ಟಾಗಿ ಎದ್ದು ಕಾಣಿಸದ ಖಾಕಿ ಇಲ್ಲವೇ ಕಪ್ಪು ನೀಲಿ ಬಣ್ಣದ್ದಾಗಿರುತ್ತವೆ. ಅದೆಷ್ಟೇ ಬಾರಿ ಒಗೆದರೂ ಹರಿಯದ ಗಟ್ಟಿ ಮುಟ್ಟಾದ ಬಟ್ಟೆಗಳು ದೈಹಿಕ ಶ್ರಮದ ಕೆಲಸಗಳನ್ನು ಮಾಡುವವರಿಗೆ ಬೇಕು. ಆದ್ದರಿಂದ ಅವರು ಸಮವಸ್ತ್ರಗಳನ್ನು ತಿಳಿಸುತ್ತಾರೆ, ಹೊರತು ಅವರ ದರ್ಜೆ ಕೆಳಮಟ್ಟದಲ್ಲ.

ಜನರನ್ನು ಅವರು ಹಾಕಿರುವ ದಿರಿಸಿನ ಮೇಲೆ ಗೌರವಿಸದಿರಿ. ಯಾರನ್ನೂ ಅಸಡ್ಡೆ ಮಾಡದಿರಿ. ಯಾವುದೇ ವಿಷಯವನ್ನು ಅನವಶ್ಯಕವಾಗಿ ಎಳೆಯಬೇಡಿ. ಯಾರಿಗೆ ಕಾಯುವ ತಾಳ್ಮೆ ಇರುತ್ತದೆಯೋ ಅವರಿಗೆ ಪಾಠ ಕಲಿಸುವ ಧೈರ್ಯವೂ ಇರುತ್ತದೆ... ಅದು ಕೂಡ ಅತ್ಯಂತ ಪ್ರೀತಿಪೂರ್ವಕವಾಗಿ.

**–ವೀಣಾ ಹೇಮಂತ್ ಗೌಡ ಪಾಟೀಲ್**
**ಮುಂಡರಗಿ ಗದಗ್**

# ಸಿಎಂ –ಡಿಸಿಎಂ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಬೃಹತ್ ಪ್ರತಿಭಟನೆ



**ಬೆಂಗಳೂರು,ಜೂ.17–** ನಗರದ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಉಂಟಾದ ಕಾಲ್ತುಳಿತದ ಸಂಬಂಧ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ರಾಜೀನಾಮೆಗೆ ಒತ್ತಾಯಿಸಿ ನಗರದ ಫ್ರಿ?ಡಂಪಾರ್ಕ್‌ನಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಿತು. ಪ್ರತಿಭಟನೆಯಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಮಂಡಲದ ಉಭಯ ಸದನಗಳ ಪ್ರತಿಪಕ್ಷದ ನಾಯಕರಾದ ಆರ್.ಅಶೋಕ್, ಚಲವಾದಿ ನಾರಾಯಣಸ್ವಾಮಿ, ಸಂಸದರಾದ ಗೋವಿಂದ ಕಾರಜೋಳ, ಪಿ.ಸಿ.ಮೋಹನ್, ಶಾಸಕರಾದ ಕೆ.ಗೋಪಾಲಯ್ಯ,ಸಿ.ಕೆ.ರಾಮಮೂರ್ತಿ, ಭೈರತಿ ಬಸವರಾಜ್, ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಹಾಗೂ ಪಕ್ಷದ ನೂರಾರು ಕಾರ್ಯಕರ್ತರು ಭಾಗಿಯಾಗಿದ್ದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡ ಬಹುತೇಕರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳು ನೈತಿಕ ಹೊಣೆ ಹೊತ್ತು ತಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಈ ಸರ್ಕಾರವನ್ನು ಕರ್ನಾಟಕದ ಜನತೆ ಶಾಶ್ವತವಾಗಿ ಮನೆಗೆ ಕಳುಹಿಸುತ್ತಾರೆ ಎಂದು ಎಚ್ಚರಿಕೆ ಕೊಟ್ಟರು. ಈ ಸಂದರ್ಭದಲ್ಲಿ ಫ್ರಿ?ಡಂಪಾರ್ಕ್‌ನಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧಿಕೃತ ನಿವಾಸ ಕಾವೇರಿಗೆ ಮುತ್ತಿಗೆ ಹಾಕಲು ಹೊರಟಾಗ ಮಾರ್ಗಮಧ್ಯೆ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ ತಡೆದರು.

ಈ ವೇಳೆ ಪೊಲೀಸರು ಮತ್ತು ಪ್ರತಿಭಟನಾನಿರತರ ನಡುವೆ ಭಾರೀ ಮಾತಿನ ಚಕಮಕಿ ನಡೆಯಿತು. ಇದರ ನಡುವೆಯೇ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಆರ್‌ಸಿಬಿ ವಿಜಯೋತ್ಸವ ವಿಚಾರದಲ್ಲಿ ಸಿಎಂ, ಡಿಸಿಎಂಗೆ ಪ್ರತಿಷ್ಠೆ, ಪೈಪೋಟಿ ಏರ್ಪಟ್ಟಿತ್ತು. ತಮ ಇಮೇಜ್ ಹೆಚ್ಚಿಸಿಕೊಳ್ಳಲು ಹುಚ್ಚಾಟ ನಡೀತು. ಇವರ ಹುಚ್ಚಾಟದ ಪರಿಣಾಮ 11 ಜನ ಅಪಾಯಕರ ಪ್ರಾಣ ಹೋಗಿದೆ. ಸಿಎಂ, ಡಿಸಿಎಂ ತಮ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಹುಚ್ಚಾಟಕ್ಕೆ ಬಿದ್ದಿದ್ದರು. ಇಂಥ ಭಂಡ ಸಿಎಂ, ಡಿಸಿಎಂ ಅನ್ನು ನಾವು ಎಲ್ಲಿಯೂ ನೋಡಿರಲಿಲ್ಲ ಎಂದು ಕಿಡಿಕಾರಿದರು.

ಸಿಎಂ, ಡಿಸಿಎಂ, ಸಚಿವರಿಗೆ ಭದ್ರತೆ ಕೊಡಬೇಕು ಎಂದು ವಿಧಾನಸೌಧಕ್ಕೆ ಭದ್ರತೆ ತಗೊಂಡರು. ವೇದಿಕೆ ಮೇಲೆ ಸಿಎಂ, ಡಿಸಿಎಂ, ಸಚಿವರ ಮಕ್ಕಳೂ ಇದ್ದರು. ಚಿನ್ನಸ್ವಾಮಿ ಕ್ರಿ?ಡಾಂಗಣದ ಕಾರ್ಯಕ್ರಮಕ್ಕೆ ಭದ್ರತೆ ಕೊರತೆ ಆಯಿತು. ಇದರ ಪರಿಣಾಮ 11 ಜನರ ಸಾವಾಯಿತು. ಸಾವಿಗೆ ಸಿಎಂ, ಡಿಸಿಎಂ ಕಾರಣರಾಗಿದ್ದು ಇಬ್ಬರೂ ರಾಜೀನಾಮೆ ಕೊಡಬೇಕು. ಸರ್ಕಾರವೇ 11 ಜನರ ಕೊಲೆ ಮಾಡಿದೆ, ಇದು ಸರ್ಕಾರದ ಪ್ರಾಯೋಜತ್ವದ ಕೊಲೆಗಳು. ಲಜ್ಜೆಗೆಟ್ಟ ಮಂತ್ರಿಗಳು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

ಸಿಎಂ, ಡಿಸಿಎಂ ಮನೆಗಳಿಗೂ ಮುತ್ತಿಗೆ ಹಾಕುತ್ತೇವೆ. ಈ ಸರ್ಕಾರ ಹೋದರೆ ಮಾತ್ರ ರಾಜ್ಯಕ್ಕೆ ಒಳ್ಳೆಯದಾಗುತ್ತದೆ ಎಂದರು. ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಕಪ್ ಗೆದ್ದಿದ್ದು ಆರ್‌ಸಿಬಿನೋ? ಸರ್ಕಾರನೋ? ಅಥವಾ ಸಿದ್ದರಾಮಯ್ಯ ಇಲ್ಲವೇ ಡಿಕೆಶಿ ಟೀಮೋ ಎಂದು ಪ್ರಶ್ನಿಸಿದ ಅವರು, ರಾಜ್ಯಪಾಲರಿಗೆ ಏನೂ ಗೊತ್ತಿರಲಿಲ್ಲ, ಅವರನ್ನೂ ಕರೆದಿದ್ದರು. ಸಿಎಂ ಅವರೇ ರಾಜ್ಯಪಾಲರನ್ನ ಕರೆದಿದ್ದವರು. ಇದು ಮನೆಹಾಳ ಸರ್ಕಾರ ಎಂದು ಆಕ್ರೋಶ ಹೊರಹಾಕಿದರು.

ಫೋಟೋ ತೆಗೆಸಿಕೊಂಡವರು ನಿಮ ಮಕ್ಕಳು, ಅಮಾನತುಗೊಂಡವರು ಬೇರೆಯವರ ಮಕ್ಕಳು. ಈ ಘಟನೆ ಇಡೀ ದೇಶ ನೋಡಿದೆ. ಅಪರಾಧಿ ಯಾರು ಅನ್ನೊದು ಸಾಬೀತಾಗಿದೆ.ಈ ಸರ್ಕಾರಕ್ಕೆ ಜನರ ಶಾಪ ತಟ್ಟದೆ ಇರದು ಎಂದರು.

ನಮ ಪ್ರತಿಭಟನೆಗೆ ಭಾರೀ ಸಂಖ್ಯೆಯಲ್ಲಿ ಪೊಲೀಸ್ ಭದ್ರತೆ ಕೊಟ್ಟಿದ್ದರು. ವಿಜಯೋತ್ಸವ ದಿನ ಲಕ್ಷ ಲಕ್ಷ ಅಭಿಮಾನಿಗಳು ಬಂದಿದ್ರು..ಎಷ್ಟು ಭದ್ರತೆ ಕೊಡಬೇಕಿತ್ತು ಈ ಬಗ್ಗೆ ಕನಿಷ್ಟ ಜ್ಞಾನವೂ ಕೂಡ ಸರ್ಕಾರಕ್ಕೆ ಇಲ್ಲ ಎಂದು ಟೀಕಿಸಿದರು.

ತೆಲುಗು ನಟ ಅಲ್ಲು ಅರ್ಜುನ್ ಅವನ ಮನೆಗೆ ಹೋಗಿ ಎಳೆದುತಂದು ಜೈಲಿಗೆ ಹಾಕಿದ್ದೀರಿ. ಅಲ್ಲೂ ಕಾಂಗ್ರೆಸ್ ಸರ್ಕಾರ, ಇಲ್ಲೂ ಕಾಂಗ್ರೆಸ್ ಸರ್ಕಾರ. ನಾಚಿಕೆ ಆಗೋದಿಲ್ಲವೇ? ಎಂದು ಪ್ರಶ್ನಿಸಿದರು.

ಸಂಸದ ಕಾರಜೋಳ ಸರ್ಕಾರದ ವಿರುದ್ಧ ಆಕ್ರೊ?ಶ ವ್ಯಕ್ತಪಡಿಸಿ, ವೃದ್ಧಾಪ್ಯ ವೇತನಕ್ಕೂ ಕೊಕ್ಕೆ ಹಾಕಲು ಸರ್ಕಾರ ಹೊರಟಿದೆ. ಇದು ಕೆಟ್ಟ ಸರ್ಕಾರ, ಇದನ್ನು ತೊಲಗಿಸಬೇಕು ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಸರ್ಕಾರ ಶಾಪಗ್ರಸ್ಥ ಸರ್ಕಾರ. ಮಾನ ಮರ್ಯಾದೆ ಬಿಟ್ಟವರು ಊರಿಗೆ ದೊಡ್ಡವರು. ಹಾಗೇ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಮೂರೂ ಬಿಟ್ಟು ಊರಿಗೆ ದೊಡ್ಡವರು.ಮಾನ ಮರ್ಯಾದೆ ಇದಿದ್ದರೆ ರಾಜೀನಾಮೆ ಕೊಡಬೇಕಿತ್ತು ಎಂದು ಪ್ರಶ್ನಿಸಿದರು.

ರಾಜ್ಯದ ಖಜಾನೆ ಖಾಲಿಯಾಗಿದೆ. ಕಾಂತರಾಜ್ ವರದಿಗೆ ನೂರಾರು ಕೋಟಿ ಹಣ ಖರ್ಚು ಮಾಡಿ ತಿರಸ್ಕಾರ ಮಾಡಿದ್ದಾರೆ. ರಾಜ್ಯದಲ್ಲಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ಕೊಲೆಗಳಾಗುತ್ತಿವೆ. ಇಂತಹ ಕೆಟ್ಟ ಸರ್ಕಾರವನ್ನು ನಾವು ನೋಡಿಲ್ಲ ಎಂದು ವಾಗ್ದಾಳಿ ನಡೆಸಿದರು. ವಿಧಾನಪರಿಷತ್‌ನ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, ಕಾಲ್ತುಳಿತಕ್ಕೆ ಇಂಟಲಿಜೆನ್ ದಳವೇ ಕಾರಣ. ನಿಂಬಾಳ್ಕರ್ ವಿರುದ್ಧ ಯಾಕೆ ಕ್ರಮ ತಗೊಂಡಿಲ್ಲ ನಿಂಬಾಳ್ಕರ್ ವಿರುದ್ಧ ಕ್ರಮ ಕೈಗೊಳ್ಳಲು ಸಿಎಂಗೆ ತಾಕತ್ತು ಇಲ್ಲವೇ ಕ್ರಮ ತಗೊಂಡಿದ್ದರೆ ಸಿದ್ದರಾಮಯ್ಯ ಮಾಜಿ ಸಿಎಂ ಆಗಿ ಬಿಡುತ್ತಿದ್ದರು ಎಂದು ವ್ಯಂಗ್ಯವಾಡಿದರು.

ಮಾಜಿ ಸಚಿವ ಸುನೀಲ್ ಕುಮಾರ್ ಮಾತನಾಡಿ, ಆರ್‌ಸಿಬಿ ವಿಜಯೋತ್ಸವದಲ್ಲಿ 11 ಜನರು ಬಲಿಯಾಗಿದ್ದರೂ ಈ ಸರ್ಕಾರಕ್ಕೆ ಸಾಸಿವೆ ಕಾಳಿನಷ್ಟೂ ಪಶ್ಚಾತ್ತಾಪವಿಲ್ಲ. ಸಿಎಂ, ಡಿಸಿಎಂ ನಡುವಿನ ಪೈಪೋಟಿಯಿಂದ ಈ ಸಾವುಗಳಾಗಿವೆ. ಆದರೆ ನಮ ತಪ್ಪಿಲ್ಲ ಎಂದು ಬಹಿರಂಗವಾಗಿ ಹೇಳಿಕೆ ಕೊಡುತ್ತಿದ್ದಾರೆ ಎಂದು ಹರಿಹಾಯ್ದರು.

ವಿಮಾನ ದುರಂತಕ್ಕೂ ಈ ದುರಂತಕ್ಕೂ ಹೋಲಿಕೆ ಸರಿಯಲ್ಲ. ವಿಮಾನ ದುರಂತ ಆಗಿದ್ದು ತಾಂತ್ರಿಕ ದೋಷದಿಂದ. ಕಾಲ್ತುಳಿತ ಸಾವುಗಳಾಗಿದ್ದು ನಾಯಕರ ವೈಫಲ್ಯದಿಂದ. ಇವರು ರಾಜೀನಾಮೆ ಕೊಡುವವರೆಗೂ ಹೋರಾಟ ಮಾಡುತ್ತೆ?ವೆ ಎಂದು ಎಚ್ಚರಿಸಿದರು. ನಮನ್ನ ಹೆಗಲ ಮೇಲೆ ಡಿಕೆಶಿ ಹೊತ್ಕೊಂಡು ಹೋಗೋದು ಆಮೇಲೆ ಇರಲಿ. ಮೊದಲು ಡಿಕೆಶಿ ಸರಿಯಾಗಿ ಸೈಕಲ್ ಹೊಡೆಯೋದನ್ನು ಕಲಿಯಲಿ ಎಂದು ಲೇವಡಿ ಮಾಡಿದ ಸುನೀಲ್‌ಕುಮಾರ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ತಿರುಗೇಟು ಕೊಟ್ಟರು.

# ರಾಜ್ಯಭಾರಿ ಮಳೆಗೆ ಜಲಾಶಯಗಳ ಒಳ ಹರಿವು ಹೆಚ್ಚಳ



**ಬೆಂಗಳೂರು, ಜೂ.17–** ಕರಾವಳಿ, ಮಲೆನಾಡು ಸೇರಿದಂತೆ ರಾಜ್ಯದ ಕೆಲವು ಭಾಗಗಳಲ್ಲಿ ಕಳೆದ 8–10 ದಿನಗಳಿಂದ ಆರ್ಭಟಿಸುತ್ತಿರುವ ಮುಂಗಾರು ಮಳೆ ಇನ್ನೂ ಎರಡು ದಿನ ಮುಂದುವರೆಯಲಿದೆ. ಆದರೆ, ನಾಳೆಯಿಂದ ಮಳೆಯ ಪ್ರಮಾಣ ಇಳಿಮುಖವಾಗುವ ಮುನ್ಸೂಚನೆಗಳಿವೆ. ಮುಂಗಾರು ಚುರುಕಾಗಿ ಮತ್ತೆ ಆರ್ಭಟಿಸುತ್ತಿರುವ ಹಿನ್ನೆಲೆಯಲ್ಲಿ ನದಿಗಳ ನೀರಿನ ಮಟ್ಟ ಗಣನೀಯವಾಗಿ ಏರಿಕೆ ಕಂಡಿದ್ದು, ಜಲಾಶಯಗಳ ಒಳಹರಿವು ಹೆಚ್ಚಾಗಿಗೆ. ಜಲಪಾತಗಳಲ್ಲಿ ಜೀವಕಳೆ ತುಂಬಿದ್ದು, ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿವೆ. ಕೃಷ್ಣಾ, ಕಾವೇರಿ ಕಣಿವೆಯ ಪ್ರಮುಖ ನದಿಗಳ ಪ್ರಮುಖ ಜಲಾಶಯಗಳ ನೀರಿನ ಮಟ್ಟ ಏರತೊಡಗಿದೆ.

ಮಲೆನಾಡು ಭಾಗದಲ್ಲಿ ಇನ್ನೆರಡು ದಿನಗಳ ಕಾಲ ಭಾರಿ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ಜಲಾಶಯಗಳ ನೀರಿನ ಮಟ್ಟದಲ್ಲಿ ಗಣನೀಯ ಏರಿಕೆ ಕಂಡುಬರಲಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ, ಉಡುಪಿ, ಶಿವಮೊಗ್ಗ, ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಹಾವೇರಿ, ಮೈಸೂರು, ದಾವಣಗೆರೆ ಜಿಲ್ಲೆಗಳಲ್ಲಿ ವ್ಯಾಪಕ ಪ್ರಮಾಣದ ಮಳೆಯಾಗಿದೆ. ಕಾರ್ಕಳ ತಾಲ್ಲೂಕಿನ ಪಲ್ಲಿ ಗ್ರಾಮ ಪಂಚಾಯ್ತಿಯಲ್ಲಿ 230 ಮಿ.ಮೀ.ನಷ್ಟು ಭಾರಿ ಮಳೆಯಾಗಿದೆ.

ಹಾಸನ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದ್ದು, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಅಲ್ಲಲ್ಲಿ ಮಳೆ ಬಿದ್ದಿದೆ. ಉಳಿದಂತೆ ರಾಜ್ಯದ ಇತರ ಜಿಲ್ಲೆಗಳಲ್ಲಿ ಚದುರಿದಂತೆ ಕೆಲವೆಡೆ ಮಾತ್ರ ಹಗುರದಿಂದ ಸಾಧಾರಣ ಮಳೆಯಾಗಿದೆ. ಜಲ ವಿದ್ಯುತ್ ಉತ್ಪಾದಿಸುವ ಲಿಂಗನಮಕ್ಕಿ, ಸೂಪಾ, ವಾರಾಹಿ ಜಲಾಶಯಗಳಿಗೆ ಒಟ್ಟು 74 ಸಾವಿರ ಕ್ಯುಸೆಕ್ ಅಧಿಕ ಒಳಹರಿವು ಇದೆ. ಕಾವೇರಿ ಕಣಿವೆಯ ಹಾರಂಗಿ ಹಾಗೂ ಕಬಿನಿ ಜಲಾಶಗಳ ಒಳಹರಿವು ಹೆಚ್ಚಾಗಿರುವ ಪರಿಣಾಮ ಹೊರ ಹರಿವನ್ನು ಹೆಚ್ಚಿಸಲಾಗಿದೆ. ಹಾರಂಗಿ ಜಲಾಶಯ ಶೇ.72ರಷ್ಟು ಭರ್ತಿಯಾಗಿದ್ದರೆ, ಕಬಿನಿ ಜಲಾಶ ಶೇ.84ರಷ್ಟು ತುಂಬಿದೆ. ಈ ಜಲಾಶಯಕ್ಕೆ ಪ್ರಸ್ತುತ 15 ಸಾವಿರ ಕ್ಯುಸೆಕ್‌ಗೂ ಅಧಿಕ ಒಳಹರಿವು ಇದೆ.

ಶೇ.70ರಷ್ಟು ಭರ್ತಿಯಾಗಿರುವ ಹೇಮಾವತಿ ಜಲಾಶಯಕ್ಕೆ 8 ಸಾವಿರ ಕ್ಯುಸೆಕ್ ಅಧಿಕ ಪ್ರಮಾಣದ ಒಳಹರಿವು ಇದೆ. ಅದೇ ರೀತಿ ಶೇ.66ರಷ್ಟು ನೀರಿನ ಸಂಗ್ರಹವಿರುವ ಕೆಆರ್‌ಎಸ್ ಜಲಾಶಯಕ್ಕೆ 16 ಸಾವಿರ ಕ್ಯುಸೆಕ್‌ಗೂ ಅಧಿಕ ಪ್ರಮಾಣದ ಒಳ ಹರಿವು ಇದೆ. ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಕೇರಳದಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಗಳ ಒಳಹರಿವು ಇನ್ನಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಒಳಹರಿವು ಇದೇ ರೀತಿ ಮುಂದುವರೆದರೆ ಜೂನ್ ಅಂತ್ಯದೊಳಗೆ ಪೂರ್ಣ ಪ್ರಮಾಣದಲ್ಲಿ ಈ ಜಲಾಶಯಗಳು ಭರ್ತಿಯಾಗುವುದನ್ನು ತಳ್ಳಿ ಹಾಕುವಂತಿಲ್ಲ.

ಕೃಷ್ಣಾ ಕೊಳ್ಳದ ಭದ್ರಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ಆಲಮಟ್ಟಿ, ನಾರಾಯಣಪುರ ಜಲಾಶಯಗಳ ಒಳಹರಿವು ಏರಿಕೆಯಾಗಿದೆ. ಒಟ್ಟಾರೆ ಈ ಜಲಾಶಯಗಳಿಗೆ 60 ಸಾವಿರ ಕ್ಯುಸೆಕ್‌ಗೂ ಅಧಿಕ ಪ್ರಮಾಣದ ನೀರು ಹರಿದು ಬರುತ್ತಿದೆ. ಈ ಜಲಾಶಯಗಳಲ್ಲಿ ಶೇ.40ರಷ್ಟು ನೀರು ಸಂಗ್ರಹವಾಗಿದೆ. ರಾಜ್ಯ ಪ್ರಮುಖ ಜಲಾಶಯಗಳಲ್ಲಿ ಕಳೆದ ವರ್ಷ ಇದೇ ಸಂದರ್ಭದಲ್ಲಿ ಕೇವಲ 84.05 ಟಿಎಂಸಿ ಅಡಿಯಷ್ಟು ಮಾತ್ರ ನೀರಿತ್ತು. ಈ ವರ್ಷ174.66 ಟಿಎಂಸಿ ಅಡಿಯಷ್ಟು ನೀರು ಸಂಗ್ರಹವಾಗಿದೆ.ಮೇನಲ್ಲಿ ಮುಂಗಾರು ಆರಂಭವಾದಾಗ ಇದೇ ರೀತಿ ಭಾರಿ ಮಳೆಯಾಗಿತ್ತು. ಜಲಾಶಯಗಳಿಗೆ ಸಾಕಷ್ಟು ನೀರು ಬಂದಿತ್ತು.

ಕೊಂಕಣ ಭಾಗದಲ್ಲಿ ಮೇಲೆ ಸುಳಿಗಾಳಿ ಉಂಟಾಗಿರುವ ಪರಿಣಾಮ ರಾಜ್ಯದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವೆಡೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಗಳಿವೆ. ಕರಾವಳಿ ಹಾಗೂ ಕರಾವಳಿಗೆ ಹೊಂದಿಕೊಂಡಿರುವ ಜಿಲ್ಲೆಗಳಿಗೆ ಇನ್ನೆರಡು ದಿನಗಳ ಕಾಲ ಭಾರಿ ಮಳೆ ಮುನ್ನೆಚ್ಚರಿಕೆ ನೀಡಲಾಗಿದೆ. ಒಳನಾಡಿನ ಇತರ ಜಿಲ್ಲೆಗಳಲ್ಲಿ ಒಣ ಹವೆ ಇರಲಿದ್ದು, ಕೆಲವೆಡೆ ಮಾತ್ರ ಮಳೆಯಾಗಲಿದೆ ಎಂಬ ಮುನ್ಸೂಚನೆ ನೀಡಲಾಗಿದೆ.

